(ಇಂದು ದಿನಾಂಕ: 31-07-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀಸವಾಲು: ವಾದಿಯರ ಪರ ಶ್ರೀ ಕೆ ಎ ಜಿ ವಕೀಲರಿಂದ:**

1. ನನ್ನ ಮುಖ್ಯ ಸಾಕ್ಷಿ ಪ್ರಮಾಣ ಪತ್ರದಲ್ಲಿನ ಅಂಶಗಳ ಬಗ್ಗೆ ನನಗೆ ಮಾಹಿತಿ ಇದೆ. ಚೌಡಮ್ಮರವರು ಖರೀದಿ ಪತ್ರದ ದಿನ ತಮಗೆ ಹೆಣ್ಣುಮಕ್ಕಳು ಇದ್ದಾರೆ ಎನ್ನುವ ವಿಷಯವನ್ನು ಹೇಳದೇ ಖರೀದಿ ಪತ್ರ ನೊಂದಣಿ ಮಾಡಿಸಿದ್ದಾರೆ. ನರಸಮ್ಮ ಚೌಡಮ್ಮರವರ ಮಗಳು ಅಂತಾ ನನಗೆ ದಾವೆ ಸಲ್ಲಿಸಿದ ನಂತರ ಗೊತ್ತಾಗಿರುತ್ತದೆ. ನರಸಮ್ಮ ಚೌಡಮ್ಮರವರ ಮಗಳು ಅಂತಾ ಮೊದಲು ನನಗೆ ಗೊತ್ತಿರಲಿಲ್ಲ ದಾವೆ ಸಲ್ಲಿಸಿದ ನಂತರ ಗೊತ್ತಾಗಿರುತ್ತದೆ. ಚೌಡಮ್ಮರವರಿಗೆ ರಾಧಮ್ಮರವರ ಕಡೆಯಿಂದ ನೇರವಾಗಿ ವರ್ಗಾವಣೆ ಆಗಿದೆ. ದಾವಾ ಜಮೀನು ಚೌಡಮ್ಮನ ಪಿತ್ರಾರ್ಜಿತ ಆಸ್ತಿ ಅಲ್ಲ. ಅವರಿಬ್ಬರ ಮಧ್ಯೆ ಇರುವ ಸಂಬಂಧ ನನಗೆ ಗೊತ್ತಿಲ್ಲ.
2. ನಾನು ಖರೀದಿಸುವ ವೇಳೆಯಲ್ಲಿ ಚೌಡಮ್ಮನ ಕುಟುಂಬದ ಯಜಮಾನಿಕೆಯನ್ನು ಯಾರು ಮಾಡುತ್ತಿದ್ದರು ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಯಾವುದೇ ಕುಟುಂಬದಲ್ಲಿ ಹೆಣ್ಣು ಮಕ್ಕಳು ಹಿರಿತನವನ್ನು ಮಾಡುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಯಾವುದೇ ಕುಟುಂಬದಲ್ಲಿ ಗಂಡುಮಕ್ಕಳು ಹಿರಿತನವನ್ನು ಮಾಡುತ್ತಾರೆ ಎಂದರೆ, ಗಂಡು ಮಕ್ಕಳು ಇದ್ದರೇ ಅವರು ಮಾಡುತ್ತಾರೆ ಹೆಣ್ಣು ಮಕ್ಕಳು ಇದ್ದರು ಅವರು ಹಿರಿತನ ಮಾಡುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ.
3. ಚೌಡಮ್ಮರವರೇ ದಾವಾ ಆಸ್ತಿಯ ಸಂಪೂರ್ಣ ಮಾಲೀಕಳು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಿರುತ್ತೇನೆ. ರಾಧಮ್ಮರವರಿಗೆ ದಾವಾ ಆಸ್ತಿ ಹೇಗೆ ಬಂತು ನನಗೆ ಗೊತ್ತಿಲ್ಲ. ರಾಧಮ್ಮ ಮರಣದ ನಂತರ ದಾವಾ ಆಸ್ತಿ ಅಂಬಣ್ಣ ಮತ್ತು ಚೌಡಮ್ಮರವರ ಹೆಸರಲ್ಲಿ ವರ್ಗಾವಣೆ ಆಗಿದೆ ಎಂದರೆ ಸರಿ. ರಾಧಮ್ಮಳಿಗೆ ಚೌಡಮ್ಮ ಯಾವ ರೀತಿ ಸಂಬಂಧ ನನಗೆ ಗೊತ್ತಿಲ್ಲ. ಚೌಡಮ್ಮನ ಗಂಡ ದೇವಣ್ಣ ಮತ್ತು ದೇವಣ್ಣನ ಅಣ್ಣ ಅಂಬಣ್ಣ ತಂದೆ ರಾಮಣ್ಣ ಇವರು ರಾಧಮ್ಮರಿಗೆ ಯಾವ ರೀತಿ ಸಂಬಂಧ ನನಗೆ ಗೊತ್ತಿಲ್ಲ. ರಾಧಮ್ಮಳಿಗೆ ದಾವಾ ಆಸ್ತಿ ಹೇಗೆ ಬಂದಿತ್ತು ಎಂದು ನನಗೆ ಮಾಹಿತಿ ಇಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಂಧನೂರು